**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 5510/2021** **ದಿನಾಂಕಃ25-10-2025**

**ಸಿ ಡಬ್ಲೂ : 5**

**ಪಿ ಡಬ್ಲೂ : 5**

--------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಸದಾಶಿವ ಹಣಮಂತ ಹೀರೆಕುರುಬರ |
| ಗಂಡ/ ತಂದೆಯ ಹೆಸರು | ಹಣಮಂತ |
| ವಯಸ್ಸು | 48 ವರ್ಷ |
| ಉದ್ಯೋಗ | ಶೇತ್ಕಿ. |
| ವಾಸಸ್ಥಳ | ಸಾಃ ರಾಮತೀರ್ಥ |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಆಂಗ್ಲ ಭಾಷಯಲ್ಲಿ ಸಹಿ ಮಾಡುತ್ತೇನೆ. ಸಾಕ್ಷಿಗೆ ಕೃತ್ಯಕ್ಕೆ ಬಳಸಿದ ಮೋಟಾರ ಸೈಕಲ ಜಪ್ತ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿದೆ ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 7 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 4 ವರ್ಷಗಳ ಹಿಂದೆ ಐಗಳಿ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ವಿಷಯಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ 7 ರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ನನ್ನ ಜೊತೆ ಆ ದಿನ ಚಾಸಾ 4 ಸಹಿ ಮಾಡಿರುತ್ತಾನೆ. ನನ್ನ ಸಮಕ್ಷಮ ಯಾವುದೇ ವಾಹನ ಜಪ್ತು ಮಾಡಿಲ್ಲ. ಸಾಕ್ಷಿಗೆ ನಿಪಿ 4 ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ತಾನು ಇರುವುದಾಗಿ ಸಾಕ್ಷಿಯು ಒಪ್ಪಿ ಕೊಳ್ಳುತ್ತಾರೆ. ನಿಪಿ 4 ರಲ್ಲಿ ಇರುವ ವಾಹನವನ್ನು ಜಪ್ತು ಮಾಡಿದಾಗ ಸದರಿ ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಯು ನನ್ನ ಊರಿನವನು ಹಾಗೂ ನನಗೆ ಪರಿಚಯಸ್ಥ ಎಂದರೆ ಸರಿ. ದಿಃ 27.08.2021 ರಂದು ಬೆಳಿಗ್ಗೆ 9.00 ರಿಂದ 9.30 ರ ಸಮಯದಲ್ಲಿ ನನ್ನನ್ನು ಪೊಲೀಸರು ಹೀರೋ ಸ್ಪ್ಲಂಡರ ಮೋಟಾರ ಸೈಕಲ ಸಂಖ್ಯೆ ಎಮ್ ಹೆಚ್ 10 ಡಿ ಎಫ್ 0829 ಜಪ್ತ ಪಂಚನಾಮೆ ಮಾಡುವುದು ಇದೆ ಎಂದು ಕರೆಸಿ ಪಂಚರಾಗಲು ಕೇಳಿಕೊಂಡಿದ್ದರು ಹಾಗೂ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಸಹಿ ಮಾಡಿರುತ್ತೇನೆ ಆದರೆ ಯಾವ ವಿಷಯಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ನನಗೆ ತಿಳಿಸಿಲ್ಲ ಎಂದು ನುಡಿಯುತ್ತಾರೆ. ನನಗೆ ನಿಪಿ 7 ರಲ್ಲಿ ಉಲ್ಲೆಖಿಸಿರುವ ಸಂಗತಿಗಳನ್ನು ಓದಿ ತಿಳಿಸಿರುತ್ತಾರೆ ನಾನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ಸದರಿ ಮೋಟಾರ ಸೈಕಲನ್ನು ಜಪ್ತು ಮಾಡಿದಾಗ ನಿಪಿ 4 ರ ಛಾಯಾ ಚಿತ್ರವನ್ನು ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಊರಿನವನು ಆಗಿರುವುದರಿಂದ ಅವನಿಗೆ ಸಹಾಯವಾಗಲಿ ಎಂದು ನಿಪಿ 7 ರಲ್ಲಿ ಉಲ್ಲೆಖಿಸಿರುವ ಸಂಗತಿಗಳು ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ . ವಿ ಎಲ್ ಕೆ ವಕೀಲರಿಂದಃ**

ಪೊಲೀಸರು ನನ್ನ ಸಹಿಯನ್ನು ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಿಪಿ 4 ಛಾಯಾ ಚಿತ್ರವನ್ನು ಯಾತಕ್ಕಾಗಿ ತೆಗೆದಿರುತ್ತಾರೆ ಎಂದರ ನನಗೆ ಗೊತ್ತಿಲ್ಲ. ನನ್ನನ್ನು ಪಂಚರಾಗಲು ಪೊಲೀಸರು ಕೇಳಿಕೊಂಡಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.